ದಿನಾಂಕ 11-07-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದ ಃ</u>**

ಎರಡು ಕ್ರಯಪತ್ರದ ಪ್ರತಿಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು. ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ 10 ತೇಗದ ಮರಗಳು, ಒಂದು ಕೊಳವೆ ಬಾವಿ, ಎರಡು ಹುಣಸೇ ಮರ, ನಾಲ್ಕು ತೆಂಗಿನ ಮರಗಳು, ಒಂದು ಹೆಬ್ಬೇವು ಮರ, ನಾಲ್ಕು ಕಾಡು ಮರಗಳು ಇದ್ದು ಅವುಗಳನ್ನೂ ಸಹ ತೆಗೆದುಕೊಂಡಿದ್ದಾರೆ. ನಮ್ಮದು ಮೂರು ಗುಂಟೆ ಜಮೀನು ಹೋಗಿದೆ.

**<u>ಪಾಟೀಸವಾಲುಃ ಜಿಲ್ಲಾ ಸರ್ಕಾರಿ ವಕೀಲರಿಂದಃ</u>**

ಒಂದು ಎಕರೆಗೆ 40 ರಿಂದ 50 ತೆಂಗಿನ ಸಸಿಗಳನ್ನು ಹಾಕಬಹುದು ಎಂದರೆ ಸರಿ. 3,76,507 ಹಣವನ್ನು ತೆಗೆದುಕೊಂಡಿದ್ದೇನೆ. ಮೂರು ಗುಂಟೆ ಜಮೀನಿನಲ್ಲಿ ಮೂರು ಕೊಳವೆ ಬಾವಿ ಇಲ್ಲ ಎಂದರೆ ಸರಿಯಲ್ಲ. ಎರಡು ಕೊಳವೆ ಬಾವಿ ಹೋಗಿವೆ. ಒಂದೇ ಕೊಳವೆ ಬಾವಿ ಹೋಗಿದೆ ಎಂದರೆ ಸರಿಯಲ್ಲ. ಒಂದು ಗುಂಟೆ ಜಮೀನು ಎರಡು ಲಕ್ಷ ರೂ. ಬೆಲೆ ಬಾಳುತ್ತಿತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನಾನು ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ಮರಗಳು ಇಲ್ಲ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ಮರಗಳ ಮೌಲ್ಯವನ್ನು ಸುಳ್ಳಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ನೋಟೀಸನ್ನು 2017 ರಲ್ಲಿ ನೀಡಿದರು. ನಾನು ಹಾಜರುಪಡಿಸಿರುವ ಕ್ರಯಪತ್ರ 2021 ರನೇ ಇಸವಿಯದ್ದು ಎಂದರೆ ಸರಿ. ಒಂದು ಗುಂಟೆ ಏಳು ಲಕ್ಷ ರೂ. ಬೆಲೆ ಬಾಳುತ್ತದೆ ಎಂದು ಉದ್ದೇಶಪೂರ್ವಕವಾಗಿ ಬರೆಸಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. 2021 ರ ಕ್ರಯಪತ್ರವನ್ನು ಪರಿಗಣಿಸಲು ಬರುವುದಿಲ್ಲ ಎಂದರೆ ನಾನು ಏನೂ ಹೇಳಲು ಬರುವುದಿಲ್ಲ.

ನಾನು ಹಾಜರುಪಡಿಸಿರುವ ಕ್ರಯಪತ್ರಗಳು ಜಮೀನನ್ನು ಸ್ವಾಧೀನಪಡಿಸಿಕೊಂಡ ನಂತರದ ಕ್ರಯಪತ್ರಗಳು ಎಂದರೆ ಸರಿ. ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಏನು ಮೌಲ್ಯ ಇತ್ತೋ ಅದರಂತೆ ಪರಿಹಾರವನ್ನು ನೀಡಿದ್ದಾರೆ ಎಂದರೆ , ಕಡಿಮೆ ನೀಡಿದ್ದಾರೆ. ಸಾರ್ವಜನಿಕ ಉದ್ದೇಶಕ್ಕಾಗಿ ರಸ್ತೆಯನ್ನು ಮಾಡಿದ್ದಾರೆ ಎಂದರೆ ಸರಿ. ನಾನು ಹೆಚ್ಚಿನ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸಾ ಸ ಇ ಎ ಒ

1 ನೇ ಅಧಿಕ ಜಿಲ್ಲಾ ನ್ಯಾಯಾಧೀಶರು,
ತುಮಕೂರು.